O.S.102 /2011

P.W.3

<u>ಸಾಕ್ಷಿಯನ್ನು ದಿನಾಂಕಃ **21-11-2019** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಮುಂದುವರೆದ ಪಾಟೀಸವಾಲು ಪ್ರತಿವಾದಿಯ ಪರ ವಕೀಲರಾದ ಶ್ರೀ ಜಿ ಸಿ ಜಿ ರವರಿಂದಃ</u>

ನಮ್ಮ ಊರಿನ ಗ್ರಾಮ ನಕಾಶೆಯನ್ನು ನೋಡಿರುತ್ತೇನೆ. ಗ್ರಾಮ ಲೆಕ್ಕಾಧಿಕಾರಿ ಸರ್ವೆ ಮಾಡಲು ಬಂದಾಗ ಗ್ರಾಮ ನಕಾಶೆಯನ್ನು ನೋಡಿದೆ. ಗ್ರಾಮ ನಕಾಶೆಯಲ್ಲಿ ಎಷ್ಟು ದಾರಿಗಳನ್ನು ತೋರಿಸಿರುತ್ತಾರೆಂದು ನನಗೆ ಗೊತ್ತಿಲ್ಲ. 5 ವರ್ಷಗಳ ಹಿಂದೆ ಗ್ರಾಮ ನಕಾಶೆಯನ್ನು ನೋಡಿದ ನಂತರ ಯಾವತ್ತೂ ಸದರಿ ನಕಾಶೆಯನ್ನು ನೋಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ದಲ್ಲಿ ಹೇಳಿರುವ ಸರ್ವೆ ನಂಬರ್ ಗಳು ಎಲ್ಲಾ ನನಗೆ ನೆನಪಿದೆ. ಪ್ರತಿವಾದಿ ನೀಲಮ್ಮ ರವರ ಸರ್ವೆ ನಂಬರ್ 31. 2 ನೇ ಪ್ರತಿವಾದಿ ಮಲ್ಲಪ್ಪ ರವರ ಜಮೀನಿನ ಸರ್ವೆ ನಂಬರ್ 31. 4 ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ 57. 5 ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ 30. 1 ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ 31. ಮುಸುಕಿನಕಲ್ಲಹಳ್ಳಿ ಗ್ರಾಮವನ್ನು ತಲುಪಲು ಸರ್ವೆ ನಂಬರ್ 51, 61, 59, 60, 27, 18, 19 ಮತ್ತು 17 ರ ಮೂಲಕ ಹೋಗಬೇಕು. ಬಂಡಿದಾರಿಗೆ 1 ನೇ ಪ್ರತಿವಾದಿಯ ಜಮೀನು ಹೊಂದಿಕೊಂಡು ಇಲ್ಲ. 1 ನೇ ಪ್ರತಿವಾದಿಯ ಜಮೀನಿಗೆ ತಲುಪಲು ಸರ್ವೆ ನಂಬರ್ 17 ರಲ್ಲಿ ತಿರುವು ಪಡೆದುಕೊಂಡು ಹೋಗಬೇಕು ಎಂದು ಗ್ರಾಮ ನಕಾಶೆಯಲ್ಲಿ ನಮೂದು ಇರುತ್ತದೆ. 1 ನೇ ಪ್ರತಿವಾದಿಯ ಸುತ್ತ ಮುತ್ತಲಿನ ಸರ್ವೆ ನಂಬರ್ ಜಮೀನಿನ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 17 1 ನೇ ಪ್ರತಿವಾದಿಯ ಜಮೀನಿಗೆ ಹೊಂದಿಕೊಂಡಂತೆ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಎಷ್ಟು ಮಾಹಿತಿ ನನಗೆ ಎಂದು ನುಡಿಯುತ್ತಾರೆ.

2. ಕೆಂಚಮ್ಮಹಳ್ಳಿಗೆ ಹೋಗಲು ಸರ್ವೆ ನಂಬರ್ 51, 53, 33, 30 ಮತ್ತು 31 ರ ಮೂಾಲಕ ದಾರಿ ಹೋಗುತ್ತದೆ. ಸದರಿ ಜಮೀನಿನನ್ನು ಸಹ ಗ್ರಾಮ ನಕಾಶೆಯಲ್ಲಿ ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿಯ ಜಮೀನಿನ ಮೂಲಕ ಕೆಂಚಮ್ಮನಹಳ್ಳಿಗೆ ಹೋಗಲು ದಾರಿ ಇದೆ ಎಂದು ಬರೆಯಿಸಿರುವುದು ಸುಳ್ಳು ಇರುತ್ತದೆ ಎಂದರೆ ಸಾಕ್ಷಿಯು ಉತ್ತರಿಸದೇ ಸುಮ್ಮನೆ ನಿಂತಿರುತ್ತಾರೆ. ನಮ್ಮ ಊರಿನ ಗ್ರಾಮ ನಕಾಶೆಯಲ್ಲಿ 1 ನೇ ಪ್ರತಿವಾದಿಯ ಜಮೀನಿನಲ್ಲಿ ದಾರಿ ಹೋಗುತ್ತದೆ ಎಂದು ತೋರಿಸಿಲ್ಲ ಎಂದರೆ ಸಾಕ್ಷಿಯು ನಕಾಶೆಯಲ್ಲಿ ನೋಡಿದ್ದನ್ನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ವಾದಿ ಮತ್ತು ಅವರ ಜಮೀನಿನ ಮೂಲಕ ಓಡಾಡುವ ವಿಚಾರ ನನಗೆ ಗೊತ್ತಿದ್ದರೂ ಸಹ ವಾದಿಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕೆ ಅವರ ಪರವಾನಿಗೆ ಬಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು 3 ನೇ ಪ್ರತಿವಾದಿಗಳು ಸಂಬಂಧಿಕರು ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

O.S.102 /2011

P.W.3

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**